ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ಉಪತಹಶೀಲ್ದಾರವರ ನ್ಯಾಯಾಲಯ ನಾಡಕಛೇರಿ ಗುಡೇಕೋಟೆ

ಸಂ/ಕಂ/ಹ.ಬ./ನಾಕಗು/07/2016-17. ದಿನಾಂಕ 20-09-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಪಿ.ಲಕ್ಷ್ಮೀದೇವಿ ಗಂಡ ಲೇಟ್ ಬಸವರಾಜ<br>2)ಶಿವಪ್ಪ ತಂದೆ ಲೇಟ್ ಹೂಲೆಪ್ಪ<br>ರಾಮದುರ್ಗ ಗ್ರಾಮ ಕೂಡ್ಲಿಗಿ ತಾಲೂಕು | ಷಣ್ಮುಖಪ್ಪ ತಂದೆ ರುದ್ರಪ್ಪ<br>ರಾಮದುರ್ಗ ಗ್ರಾಮ<br>ಕೂಡ್ಲಿಗಿ ತಾಲೂಕು |
| ಕೂಡ್ಲಿಗಿ ತಾಲೂಕು ರಾಮದುರ್ಗ ಗ್ರಾಮದ ಸನಂ 136ಇ. ವಿಸ್ತೀರ್ಣ 0-15 ಸೆಂಟ್ಸು ಜಮೀನನ್ನು ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ರಾಮದುರ್ಗ ಗ್ರಾಮದ ಸನಂ 136ಇ. ವಿಸ್ತೀರ್ಣ 0-15 ಸೆಂಟ್ಸು ಜಮೀನನ್ನು ಸದರಿ ಗ್ರಾಮದ ಪಿ.ಲಕ್ಷ್ಮೀದೇವಿ ಗಂಡ ಲೇಟ್ ಬಸವರಾಜ ಇವರು ದಿನಾಂಕ 01-02-2016 ರ ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ರಾಮದುರ್ಗ ಇವರು ನಮೂನೆ-21 ನೋಟಿಸನ್ನು ದಿನಾಂಕ 27-02-2016. ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ಗ್ರಾಮದ ಷಣುಖಪ್ಪ ತಂದೆ ರುದ್ರಪ್ಪ ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣದ ಎಂ.ಆರ್.ನಂಬರ್: 28/2015-16. ದಿನಾಂಕ 28-03-2016. ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 21-06-2016 ರಿಂದ 20-09-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಗೈರು ಹಾಜರಾಗಿರುತ್ತಾರೆ. ತಕರಾರುದಾರರು ಹಾಗೂ ಅವರ ಪರ ನ್ಯಾಯಾವಾದಿಗಳು ಹಾಜರಾಗಿರುತ್ತಾರೆ. ಅರ್ಜಿದಾರರು ರಾಮದುರ್ಗ ಗ್ರಾಮದ ಸನಂ 136ಇ. ವಿಸ್ತೀರ್ಣ 0-15 ಸೆಂಟ್ಸು ಜಮೀನು ನನ್ನ ಗಂಡನ ಅಣ್ಣನವರಾದ ಶಿವಪ್ಪ ತಂದೆ ಲೇಟ್ ಹೂಲೆಪ್ಪ ಇವರ ಹೆಸರಲ್ಲಿ ಲೆಕ್ಕ ದಾಖಲೆ ಪಟ್ಟಾ ಇದ್ದು ದಿನಾಂಕ 03-06-1991 ರಂದು ನಿಧನ ಹೊಂದಿದ್ದು ಹಾಗೂ ಇವರು ಅವಿವಾಹಿತರಾಗಿರುತ್ತಾರೆ. ಹಾಗೂ ನಮ್ಮ ಅತ್ತೆಯವರಾದ ಶರಣಮ್ಮ ಗಂಡ ಲೇಟ್ ಹೂಲೆಪ್ಪ ಇವರು ದಿನಾಂಕ 01-02-2016 ರಂದು ನನ್ನ ಹೆಸರಲ್ಲಿ ಪಾಲು ವಿಭಾಗದ ಪತ್ರ ಬರೆಯಿಸಿ ಕೊಟ್ಟಿರುತ್ತಾರೆ. ಅದರಂತೆ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಮಾತ್ರ ಸಲ್ಲಿಸಿದ್ದು ವಿಚಾರಣೆಗೆ ಗೈರು ಹಾಜರಾಗಿರುತ್ತಾರೆ.

ವಿಚಾರಣೆಯಲ್ಲಿ ತಕರಾರುದಾರರ ಪರ ನ್ಯಾಯಾವಾದಿಗಳು ಹಾಜರಾಗಿದ್ದು ಸದರಿ ವಿವಾದಿತ ಜಮೀನು ಪ್ರತಿವಾದಿಗೆ ಸಂಬಂದಿಸಿದ ಜಮೀನು ಆಗಿರುವ ಕಾರಣ ಸದರಿ ಪಾಲು ವಿಭಾಗದ ಪತ್ರ ಪ್ರಕಾರ ಅರ್ಜಿದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ನಮ್ಮ ತಕರಾರು ಇರುವುದಾಗಿ ಕೋರಿರುತ್ತಾರೆ.

ಮು.ತಿ.ನೋ-2

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ತಕರಾರುದಾರರ ಪರ ನ್ಯಾಯಾವಾದಿಗಳ ಹೇಳಿಕೆಗಳನ್ನು ಕೇಳಿ ಅರ್ಜಿದಾರರಿಗೆ ವಿಚಾರಣೆಗೆ ನೋಟಿಸ್ಸು ಜಾರಿ ಮಾಡಲಾಗಿದ್ದರೂ ಹಾಜರಾಗಿ ವಿವಾದಿತ ಸ್ವತ್ತುಗೆ ತಾವೇ ಹಕ್ಕುದಾರರ ಎಂಬುದನ್ನು ಸಾಬೀತು ಪಡಿಸುವಲ್ಲಿ ವಿಫಲರಾಗಿರುವುದರಿಂದ ಅವರು ಸಲ್ಲಿಸಿರುವ ಅರ್ಜಿಯನ್ನು ತಿರಸ್ಕರಿಸುತ್ತಾ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## –:ಆದೇಶ:–

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ರಾಮದುರ್ಗ ಗ್ರಾಮದ ಸನಂ 136ಇ. ವಿಸ್ತೀರ್ಣ 0–15 ಸೆಂಟ್ಸು ಜಮೀನನ್ನು ಅರ್ಜಿದಾರರು ವಿವಾದಿತ ಸ್ವತ್ತಿಗೆ ತಾವೇ ಹಕ್ಕುದಾರರು ಎಂಬುದನ್ನು ವಿಚಾರಣೆಗೆ ಹಾಜರಾಗಿ ಸಾಬೀತು ಪಡಿಸುವಲ್ಲಿ ವಿಫಲರಾಗಿರುವುದರಿಂದ ಅವರು ಸಲ್ಲಿಸಿರುವ ಅರ್ಜಿಯನ್ನು ತಿರಸ್ಕರಿಸುತ್ತಾ ಪಹಣಿಯನ್ನು ಯಥಾಸ್ಥಿತಿಯಂತೆ ಮುಂದುವರೆಸಲು ಆದೇಶಿಸಿ ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ಈ ಹಂತದಲ್ಲಿ ಮುಕ್ತಾಗೊಳಿಸಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 20–09–2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಛೇರಿ ಗುಡೇಕೋಟೆ.
ಗುಡೇಕೋಟೆ

ಇದರ ಪ್ರತಿಯನ್ನು:

1) ಅರ್ಜಿದಾರರಾದ ಪಿ. ಲಕ್ಷ್ಮೀದೇವಿ ಗಂಡ ಲೇಟ್ ಬಸವರಾಜ. ಶಿವಪ್ಪ ತಂದೆ ಲೇಟ್ ಹೂಲೆಪ್ಪ ರಾಮದುರ್ಗ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ಷಣುಖಪ್ಪ ತಂದೆ ರುದ್ರಪ್ಪ. ರಾಮದುರ್ಗ ಗ್ರಾಮ ಕೂಡ್ಲಿಗಿ ತಾಲೂಕು ಇವರ ಪರ ವಕೀಲರಾದ ಹೆಚ್.ಜಿ.ಪ್ರಕಾಶ ಪಾಟೀಲ್ ವಕೀಲರು ಕೂಡ್ಲಿಗಿ ಇವರ ದ್ವಾರ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.